# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

## ವಿಶೇಷ ರಾಜ್ಯ ಪತ್ರಿಕೆ

| | | |
|---|---|---|
| ಭಾಗ – ೧<br>Part – I | ಬೆಂಗಳೂರು, ಮಂಗಳವಾರ, ೦೨, ಸೆಪ್ಟೆಂಬರ್, ೨೦೨೫ (ಭಾದ್ರಪದ ,೧೧, ಶಕವರ್ಷ, ೧೯೪೭)<br>BENGALURU, TUESDAY, 02, SEPTEMBER, 2025 (BHADRAPADA ,11, SHAKAVARSHA, 1947) | ನಂ. ೫೨೫<br>No. 525 |


## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಗ್ರೇಟರ್ ಬೆಂಗಳೂರು ಪ್ರದೇಶದ ವ್ಯಾಪ್ತಿಯಲ್ಲಿ ನೂತನವಾಗಿ ಸ್ಥಾಪಿಸಲಾಗಿರುವ 05 ನಗರ ಪಾಲಿಕೆಗಳಿಗೆ ಸಂಬಂಧಿಸಿದಂತೆ, ವಾರ್ಡುಗಳ ಪುನರ್ ವಿಂಗಡಣೆ ಪ್ರಕ್ರಿಯೆಯ ಮಾರ್ಗಸೂಚಿಗಳನ್ನು ನೀಡುವ ಬಗ್ಗೆ – ಆದೇಶ.

**ಓದಲಾಗಿದೆ:**

1. ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 45 ಶಾಸನ 2024, ಬೆಂಗಳೂರು, ದಿನಾಂಕ: 24.04.2025
2. ಸರ್ಕಾರದ ಅಧಿಸೂಚನೆ ಸಂಖ್ಯೆ : ನಅಇ 100 ಬಿಬಿಎಸ್ 2025 ಭಾಗ-2, ದಿನಾಂಕ:14-05-2025
3. ಸರ್ಕಾರದ ಅಧಿಸೂಚನೆ ಸಂಖ್ಯೆ : ನಅಇ 100 ಬಿಬಿಎಸ್ 2025 ಭಾಗ-2, ದಿನಾಂಕ:15-05-2025
4. ಸರ್ಕಾರದ ಅಧಿಸೂಚನೆ ಸಂಖ್ಯೆ : ನಅಇ 170 ಬಿಬಿಎಸ್ 2025 , ದಿನಾಂಕ:19-07-2025
5. ಸರ್ಕಾರದ ಅಧಿಸೂಚನೆ ಸಂಖ್ಯೆ : ನಅಇ 170 ಬಿಬಿಎಸ್ 2025 , ದಿನಾಂಕ: 02-09-2025
6. ಸರ್ಕಾರದ ಅಧಿಸೂಚನೆ ಸಂಖ್ಯೆ : ನಅಇ 183 ಬಿಬಿಎಸ್ 2025 , ದಿನಾಂಕ: 02-09-2025

* * * * *

**ಪ್ರಸ್ತಾವನೆ:**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನು 2008 ರಲ್ಲಿ ಸ್ಥಾಪಿಸಲಾಗಿದ್ದು, ಇದು ಕರ್ನಾಟಕ ನಗರ ಪಾಲಿಕೆಗಳ ಅಧಿನಿಯಮ, 1976 (1977ರ ಕರ್ನಾಟಕ ಅಧಿನಿಯಮ 14)ರ ಉಪಬಂಧಗಳಡಿ ಹಾಗೂ ಆನಂತರ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಧಿನಿಯಮ, 2020 (2020ರ ಕರ್ನಾಟಕ ಅಧಿನಿಯಮ 53)ರ ಉಪಬಂಧಗಳ ಅಡಿ ನಿರ್ವಹಿಸಲಾಗುತ್ತಿತ್ತು. ಬಿಬಿಎಂಪಿ ಅಧಿನಿಯಮ, 2020 ರ ಉಪಬಂಧಗಳು ಬೆಂಗಳೂರು ಆಡಳಿತ ನಿರ್ವಹಣೆಗೆ ಸಾಕಾಗದಿರುವುದರಿಂದ, ಬೆಂಗಳೂರಿನಲ್ಲಿ ಬಹುಸಂಖ್ಯೆಯ ನಾಗರಿಕ ಏಜೆನ್ಸಿಗಳಿದ್ದು ಅವುಗಳ ನಡುವೆ ಸಮನ್ವಯದ ಕೊರತೆಯ ಕಾರಣದಿಂದಾಗಿ ಬೆಂಗಳೂರಿನಲ್ಲಿ ಆಡಳಿತ ಅವ್ಯವಸ್ಥೆಯನ್ನು ಸರಿಪಡಿಸುವಂತಹ ಯಾವುದೇ ಸಂಸ್ಥೆಗಳನ್ನು ಸ್ಥಾಪಿಸದಿರುವುದರಿಂದ ಮೇಲೆ ಓದಲಾದ ಕ್ರಮ ಸಂಖ್ಯೆ: (1)ರ ಸರ್ಕಾರದ

ಅಧಿಸೂಚನೆಯಲ್ಲಿ ಗ್ರೇಟರ್ ಬೆಂಗಳೂರು ಪ್ರದೇಶದಲ್ಲಿ ಪರಿಣಾಮಕಾರಿ ನಗರ ಆಡಳಿತಕ್ಕಾಗಿ ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ, 2024 ಅನ್ನು ಹೊರಡಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ:(2)ರ ಸರ್ಕಾರದ ಅಧಿಸೂಚನೆಯಲ್ಲಿ ಗ್ರೇಟರ್ ಬೆಂಗಳೂರು ಆಡಳಿತ ಅಧಿನಿಯಮ, 2024 (2025ರ ಕರ್ನಾಟಕ ಅಧಿನಿಯಮ ಸಂಖ್ಯೆ 36) ರ 1ನೇ ಪ್ರಕರಣದ (3)ನೇ ಉಪ-ಪ್ರಕರಣದಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಸದರಿ ಅಧಿನಿಯಮವು / ಅಧಿನಿಯಮದ ಎಲ್ಲಾ ಪ್ರಕರಣಗಳು ಹಾಗೂ ಉಪಬಂಧಗಳು "ದಿನಾಂಕ: 15-05-2025**"** ರಿಂದ ಜಾರಿಗೆ ಬರತಕ್ಕದ್ದೆಂದು ಗೊತ್ತುಪಡಿಸಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (3)ರ ಸರ್ಕಾರದ ಅಧಿಸೂಚನೆಯಲ್ಲಿ, ಗ್ರೇಟರ್ ಬೆಂಗಳೂರು ಆಡಳಿತ ಅಧಿನಿಯಮ, 2024 (2025ರ ಕರ್ನಾಟಕ ಅಧಿನಿಯಮ ಸಂಖ್ಯೆ 36)ರ 1ನೇ ಪ್ರಕರಣದ (2)ನೇ ಉಪ ಪ್ರಕರಣ ಹಾಗೂ 3ನೇ ಪ್ರಕರಣದಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ಸರ್ಕಾರವು **"**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ" ವ್ಯಾಪ್ತಿಯ ಪ್ರದೇಶವನ್ನು "ಗ್ರೇಟರ್ ಬೆಂಗಳೂರು ಪ್ರದೇಶ" ವೆಂದು ಗೊತ್ತುಪಡಿಸಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (4)ರ ಸರ್ಕಾರದ ಅಧಿಸೂಚನೆಯಲ್ಲಿ ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ, 2024 ರ (2025 ರ ಕರ್ನಾಟಕ ಕಾಯ್ದೆ ಸಂಖ್ಯೆ 36) ಪ್ರಕರಣ 5 ರ ಉಪ ಪ್ರಕರಣ (1) ಮತ್ತು ಪ್ರಕರಣ 7 ರ ಉಪ ಪ್ರಕರಣ (1) ರಡಿಯಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಜನಸಂಖ್ಯೆ, ವಿಸ್ತೀರ್ಣ, ಜನಸಂಖ್ಯಾ ಸಾಂದ್ರತೆ, ಉತ್ಪತ್ತಿಯಾಗುವ ಆದಾಯ, ಕೃಷಿಯೇತರ ಚಟುವಟಿಕೆಗಳಲ್ಲಿನ ಉದ್ಯೋಗದ ಶೇಕಡಾವಾರು, ಆರ್ಥಿಕ ಪ್ರಾಮುಖ್ಯತೆ, ಪ್ರದೇಶದಲ್ಲಿ ಲಭ್ಯವಿರುವ ಮೂಲಸೌಕರ್ಯ ಸೌಲಭ್ಯಗಳು ಮತ್ತು ಸದರಿ ಅಧಿನಿಯಮದ ಪ್ರಕರಣ 5 ರ ಉಪ ಪ್ರಕರಣ (1) ರ ಎರಡನೇ ಪರಂತುಕದಲ್ಲಿ ನಿಗದಿಪಡಿಸಲಾದ ಷರತ್ತುಗಳನ್ನು ಪೂರೈಸಿದ ಅನ್ವಯ, ಕರ್ನಾಟಕ ಸರ್ಕಾರವು ಗ್ರೇಟರ್ ಬೆಂಗಳೂರು ಪ್ರದೇಶದಲ್ಲಿ 1) ಬೆಂಗಳೂರು ಕೇಂದ್ರ ನಗರ ಪಾಲಿಕೆ, 2) ಬೆಂಗಳೂರು ಪೂರ್ವ ನಗರ ಪಾಲಿಕೆ, 3) ಬೆಂಗಳೂರು ಪಶ್ಚಿಮ ನಗರ ಪಾಲಿಕೆ, 4) ಬೆಂಗಳೂರು ಉತ್ತರ ನಗರ ಪಾಲಿಕೆ, 5) ಬೆಂಗಳೂರು ದಕ್ಷಿಣ ನಗರ ಪಾಲಿಕೆಗಳು ಎಂಬ 5 ಸಂಖ್ಯೆಯ ನಗರ ಪಾಲಿಕೆಗಳನ್ನು ಸ್ಥಾಪಿಸಲು ಪ್ರಸ್ತಾಪಿಸಿ, ಇದರಿಂದ ಬಾಧಿತರಾಗಬಹುದಾದ ಎಲ್ಲಾ ವ್ಯಕ್ತಿಗಳಿಂದ ಆಕ್ಷೇಪಣೆ/ ಸಲಹೆಗಳನ್ನು ಸಲ್ಲಿಸುವಂತೆ 30 ದಿನಗಳ ಕಾಲಾವಧಿಯನ್ನು ನೀಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ: (5)ರ ಸರ್ಕಾರದ ಅಧಿಸೂಚನೆಯಲ್ಲಿ ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ, 2024 ರ (2025 ರ ಕರ್ನಾಟಕ ಕಾಯ್ದೆ ಸಂಖ್ಯೆ 36) ಪ್ರಕರಣ 5 ರ ಉಪ ಪ್ರಕರಣ (3) ರೊಂದಿಗೆ ಪ್ರಕರಣ 7 ರ ಉಪ ಪ್ರಕರಣ (3) ರಡಿಯಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಗ್ರೇಟರ್ ಬೆಂಗಳೂರು ಪ್ರದೇಶದಲ್ಲಿ 1) ಬೆಂಗಳೂರು ಕೇಂದ್ರ ನಗರ ಪಾಲಿಕೆ, 2) ಬೆಂಗಳೂರು ಪೂರ್ವ ನಗರ ಪಾಲಿಕೆ, 3) ಬೆಂಗಳೂರು ಪಶ್ಚಿಮ ನಗರ ಪಾಲಿಕೆ, 4) ಬೆಂಗಳೂರು ಉತ್ತರ ನಗರ ಪಾಲಿಕೆ, 5) ಬೆಂಗಳೂರು ದಕ್ಷಿಣ ನಗರ ಪಾಲಿಕೆಗಳು ಎಂಬ 05 ಸಂಖ್ಯೆಯ ನಗರ ಪಾಲಿಕೆಗಳನ್ನು ಸ್ಥಾಪಿಸಲು ಪ್ರಸ್ತಾಪಿಸಿ, ಹೊರಡಿಸಲಾಗಿದ್ದ ಕರಡು ಅಧಿಸೂಚನೆಗೆ ಬಾಧಿತರಾದ ಸಾರ್ವಜನಿಕರು/ಸಂಘ ಸಂಸ್ಥೆಗಳಿಂದ ಸ್ವೀಕೃತವಾಗಿದ್ದ ಆಕ್ಷೇಪಣೆ / ಸಲಹೆಗಳನ್ನು ನಿಯಮಾನುಸಾರ ಪರಿಶೀಲಿಸಿ, ಗ್ರೇಟರ್ ಬೆಂಗಳೂರು ಪ್ರದೇಶದಲ್ಲಿ 05 ನಗರ ಪಾಲಿಕೆಗಳನ್ನು ಸ್ಥಾಪಿಸಿ ಅಂತಿಮ ಅಧಿಸೂಚನೆಯನ್ನು ಹೊರಡಿಸಲಾಗಿದೆ.

ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ, 2024 ರ (2025 ರ ಕರ್ನಾಟಕ ಕಾಯ್ದೆ ಸಂಖ್ಯೆ 36) ಪ್ರಕರಣ 29 ರ ಉಪ ಪ್ರಕರಣ (1), (2) ಮತ್ತು (3) (ಎ) ರಲ್ಲಿ ಈ ಕೆಳಕಂಡಂತೆ ನಿಗದಿಪಡಿಸಲಾಗಿದೆ.

**ಪ್ರಕರಣ: 29. ವಾರ್ಡ್‌ಗಳ ಪುನರ್ ವಿಂಗಡಣೆ – (1)** ಪ್ರತಿ ನಗರ ಪಾಲಿಕೆ ಸದಸ್ಯರ ಚುನಾವಣೆ ಉದ್ದೇಶಗಳಿಗೆ ಕ್ಷೇತ್ರ ಪುನರ್ ವಿಂಗಡಣೆ ಆಯೋಗದ ಶಿಫಾರಸ್ಸಿನ ಮೇರೆಗೆ ಪ್ರತಿಯೊಂದು ನಗರಪಾಲಿಕೆಯನ್ನು ವಾರ್ಡ್‌ಗಳನ್ನಾಗಿ ಈ ಮುಂದಿನ ರೀತಿಯಲ್ಲಿ ವಿಂಗಡಿಸತಕ್ಕದ್ದು.

**(ಎ)** ಗ್ರೇಟರ್ ಬೆಂಗಳೂರು ಪ್ರದೇಶದಲ್ಲಿನ ನಗರ ಪಾಲಿಕೆಯೊಳಗಿನ ಪ್ರತಿಯೊಂದು ವಾರ್ಡ್‌ಗಳ ಜನಸಂಖ್ಯೆಯು ಕಾರ್ಯಸಾಧ್ಯವಾದಷ್ಟೂ ಮಟ್ಟಿಗೆ ಒಂದೇ ಆಗಿರತಕ್ಕದ್ದು; ಮತ್ತು

**(ಬಿ)** ವಿಧಾನ ಸಭೆಯ ಸದಸ್ಯರ ಚುನಾವಣಾ ಕ್ಷೇತ್ರ ವ್ಯಾಪ್ತಿಯೊಳಗೆ ವಾರ್ಡ್‌ಗಳನ್ನು ವಿಭಾಗಿಸತಕ್ಕದ್ದು ಮತ್ತು ಯಾವುದೇ ವಾರ್ಡ್‌ಗಳಿಗೆ ಇತರೆ ಚುನಾವಣಾ ಕ್ಷೇತ್ರಗಳಿಗೆ ವ್ಯಾಪಿಸತಕ್ಕದ್ದಲ್ಲ.

**ವಿವರಣೆ –** ಈ ಪ್ರಕರಣದ ಉದ್ದೇಶಕ್ಕಾಗಿ "ಜನಸಂಖ್ಯೆ" ಎಂದರೆ ಹಿಂದಿನ ಜನಗಣತಿಯ ಅಂಕಿ ಅಂಶಗಳ ಪ್ರಕಾರ ಪ್ರಕಟಿಸಿದ ನಗರ ಜನಸಂಖ್ಯೆ

**(2)** ಸರ್ಕಾರವು, ವಾರ್ಡ್‌ಗಳ ವಿಂಗಡಣೆ ವಿಧಾನದ ಕುರಿತು ಸರ್ಕಾರಕ್ಕೆ ಶಿಫಾರಸ್ಸು ಮಾಡಲು ನಿಯಮಿಸಬಹುದಂತ ಸಂಖ್ಯೆಯ ವ್ಯಕ್ತಿಗಳನ್ನು ಒಳಗೊಂಡ ಪುನರ್ ವಿಂಗಡಣಾ ಆಯೋಗವನ್ನು ರಚಿಸತಕ್ಕದ್ದು.

**(3)** ಸರ್ಕಾರವು ಆದೇಶದ ಮೂಲಕ –

**(ಎ)** ಚುನಾವಣೆಗಳ ಉದ್ದೇಶಕ್ಕಾಗಿ ಪ್ರತಿ ನಗರ ಪಾಲಿಕೆಯ ವಾರ್ಡ್‌ಗಳನ್ನು ವಿಭಾಗಿಸಲಾಗಿದೆಯೇ ಎಂಬುದನ್ನು;

**ಪರಂತು,** ಪ್ರತಿಯೊಂದು ನಗರ ಪಾಲಿಕೆಯಲ್ಲಿ ವಾರ್ಡ್‌ಗಳ ಸಂಖ್ಯೆಯು 150 ಕ್ಕಿಂತ ಹೆಚ್ಚಿರತಕ್ಕದ್ದಲ್ಲ.

**(ಬಿ)** ಪ್ರತಿಯೊಂದು ವಾರ್ಡ್‌ನ ವ್ಯಾಪ್ತಿಯನ್ನು;

ಮೇಲೆ ಓದಲಾದ ಕ್ರಮ ಸಂಖ್ಯೆ:(6)ರ ಅಧಿಸೂಚನೆಯಲ್ಲಿ ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ, 2024ರ (2025 ರ ಕರ್ನಾಟಕ ಕಾಯ್ದೆ ಸಂಖ್ಯೆ: 36) ಪ್ರಕರಣ 29 ರ ಉಪ ಪ್ರಕರಣ (2)ರನ್ವಯ ಗ್ರೇಟರ್ ಬೆಂಗಳೂರು ಪ್ರದೇಶದ ವ್ಯಾಪ್ತಿಯಲ್ಲಿ ನೂತನವಾಗಿ ಸ್ಥಾಪಿಸಲಾಗಿರುವ 1) ಬೆಂಗಳೂರು ಕೇಂದ್ರ ನಗರ ಪಾಲಿಕೆ, 2) ಬೆಂಗಳೂರು ಪೂರ್ವ ನಗರ ಪಾಲಿಕೆ, 3) ಬೆಂಗಳೂರು ಪಶ್ಚಿಮ ನಗರ ಪಾಲಿಕೆ, 4) ಬೆಂಗಳೂರು ಉತ್ತರ ನಗರ ಪಾಲಿಕೆ, 5) ಬೆಂಗಳೂರು ದಕ್ಷಿಣ ನಗರ ಪಾಲಿಕೆಗಳಿಗೆ ಸಂಬಂಧಿಸಿದಂತೆ, ವಾರ್ಡ್‌ಗಳ ಪುನರ್ ವಿಂಗಡಣೆಗಾಗಿ 03 ತಿಂಗಳ ಅವಧಿಗೆ ಸೀಮಿತವಾಗಿ ವಾರ್ಡ್‌ಗಳ ಪುನರ್ ವಿಂಗಡಣಾ ಆಯೋಗವನ್ನು ರಚಿಸಲಾಗಿದೆ.

ಮೇಲಿನಂತೆ, ಗ್ರೇಟರ್ ಬೆಂಗಳೂರು ಪ್ರದೇಶದ ವ್ಯಾಪ್ತಿಯಲ್ಲಿ ನೂತನವಾಗಿ ಸ್ಥಾಪಿಸಲಾಗಿರುವ 1) ಬೆಂಗಳೂರು ಕೇಂದ್ರ ನಗರ ಪಾಲಿಕೆ, 2) ಬೆಂಗಳೂರು ಪೂರ್ವ ನಗರ ಪಾಲಿಕೆ, 3) ಬೆಂಗಳೂರು ಪಶ್ಚಿಮ ನಗರ ಪಾಲಿಕೆ, 4) ಬೆಂಗಳೂರು ಉತ್ತರ ನಗರ ಪಾಲಿಕೆ, 5) ಬೆಂಗಳೂರು ದಕ್ಷಿಣ ನಗರ ಪಾಲಿಕೆಗಳಿಗೆ ಸಂಬಂಧಿಸಿದಂತೆ, ವಾರ್ಡುಗಳ ಪುನರ್ ವಿಂಗಡಣೆ ಪ್ರಕ್ರಿಯೆಯ ಮಾರ್ಗಸೂಚಿಗಳನ್ನು ರಚಿಸಲು ಸರ್ಕಾರವು ತೀರ್ಮಾನಿಸಿದ್ದು, ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ನಅಇ 189 ಬಿಬಿಎಸ್ 2025,**
**ಬೆಂಗಳೂರು, ದಿನಾಂಕ: 02-09-2025.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಸರ್ಕಾರವು, ಗ್ರೇಟರ್ ಬೆಂಗಳೂರು ಪ್ರದೇಶದ ವ್ಯಾಪ್ತಿಯಲ್ಲಿ ನೂತನವಾಗಿ ಸ್ಥಾಪಿಸಲಾಗಿರುವ 1) ಬೆಂಗಳೂರು ಕೇಂದ್ರ ನಗರ ಪಾಲಿಕೆ, 2) ಬೆಂಗಳೂರು ಪೂರ್ವ ನಗರ ಪಾಲಿಕೆ, 3) ಬೆಂಗಳೂರು ಪಶ್ಚಿಮ ನಗರ ಪಾಲಿಕೆ, 4) ಬೆಂಗಳೂರು ಉತ್ತರ ನಗರ ಪಾಲಿಕೆ, 5) ಬೆಂಗಳೂರು ದಕ್ಷಿಣ ನಗರ ಪಾಲಿಕೆಗಳಿಗೆ ಸಂಬಂಧಿಸಿದಂತೆ, ವಾರ್ಡುಗಳ ಪುನರ್‌ವಿಂಗಡಣೆಯನ್ನು ಮಾಡಲು ಈ ಕೆಳಕಂಡಂತೆ ಮಾರ್ಗಸೂಚಿಗಳನ್ನು ರಚಿಸಿ ಆದೇಶಿಸಿದೆ.

**ಮಾರ್ಗಸೂಚಿಗಳು:-**

**ವಾರ್ಡುಗಳ ಸಂಖ್ಯೆ ನಿರ್ಧರಿಸುವ ವಿಧಾನ**:

1. ಲಭ್ಯವಿರುವ ಹಿಂದಿನ ಜನಗಣತಿಯ (2011ರ ಜನಗಣತಿ) ಅನುಸಾರ ಬಿಬಿಎಂಪಿ ವ್ಯಾಪ್ತಿಯಲ್ಲಿ ಒಟ್ಟು ಜನಸಂಖ್ಯೆ ಸುಮಾರು 85 ಲಕ್ಷ ಇರುತ್ತದೆ. 2023 ರ ಚುನಾವಣೆಯ ಸಂದರ್ಭದಲ್ಲಿ ಆ ವರ್ಷದ ಜನವರಿಯಲ್ಲಿ ಈ ಜನಸಂಖ್ಯೆಯು ಸುಮಾರು 144 ಲಕ್ಷಗಳಾಗಿರುತ್ತವೆ ಎಂದು ಅಂದಾಜು ಮಾಡಲಾಗಿದೆ. ಮುಂದುವರೆದು, ಹಿಂದಿನ ಜನಗಣತಿಯ (2011ರ ಜನಗಣತಿ) ಮಾಹಿತಿಯನ್ನು ಆಧರಿಸಿ ಗಮನಿಸಿದಾಗ ಪ್ರಸ್ತುತ ವಿಭಜಿಸಲಾಗಿರುವ ನಗರ ಪಾಲಿಕೆಗಳಲ್ಲಿ ಕನಿಷ್ಠ ಹಾಗೂ ಗರಿಷ್ಠ ಜನಸಂಖ್ಯೆಯು ಅನುಕ್ರಮವಾಗಿ ಬೆಂಗಳೂರು ಪೂರ್ವ ನಗರ ಪಾಲಿಕೆಯಲ್ಲಿ ಸುಮಾರು 9 ಲಕ್ಷ ಹಾಗೂ ಬೆಂಗಳೂರು ಪಶ್ಚಿಮ ನಗರ ಪಾಲಿಕೆಯಲ್ಲಿ ಸುಮಾರು 26 ಲಕ್ಷ ಇರುತ್ತದೆ. ಉಳಿದಂತೆ ಬೆಂಗಳೂರು ಕೇಂದ್ರ ನಗರ ಪಾಲಿಕೆಯು ಸುಮಾರು 15 ಲಕ್ಷ, ಬೆಂಗಳೂರು ಉತ್ತರ ನಗರ ಪಾಲಿಕೆಯು ಸುಮಾರು 18 ಲಕ್ಷ ಹಾಗೂ ಬೆಂಗಳೂರು ದಕ್ಷಿಣ ನಗರ ಪಾಲಿಕೆಯು ಸುಮಾರು 17 ಲಕ್ಷ ಜನಸಂಖ್ಯೆಯನ್ನು ಹೊಂದಿರುತ್ತವೆ. ಈ ಮಧ್ಯೆ ಜನಗಣತಿ ಆಗದೇ ಇರುವುದರಿಂದ 2023ರ ಚುನಾವಣೆಯಲ್ಲಿ ಮಾಡಿರುವ ಜನಸಂಖ್ಯೆಯ ಅಂದಾಜನ್ನು ಗಮನಿಸಿದ್ದಲ್ಲಿ, ಬೆಂಗಳೂರು ಪೂರ್ವ ನಗರ ಪಾಲಿಕೆಯಲ್ಲಿ ಸುಮಾರು 13 ಲಕ್ಷ ಮತ್ತು ಬೆಂಗಳೂರು ಪಶ್ಚಿಮ ನಗರ ಪಾಲಿಕೆಯಲ್ಲಿ ಸುಮಾರು 45 ಲಕ್ಷ ಜನಸಂಖ್ಯೆಯನ್ನು ಹೊಂದಿರುತ್ತವೆ. ಉಳಿದಂತೆ, ಬೆಂಗಳೂರು ಕೇಂದ್ರ ನಗರ ಪಾಲಿಕೆಯು ಸುಮಾರು 25 ಲಕ್ಷ, ಬೆಂಗಳೂರು ಉತ್ತರ ನಗರ ಪಾಲಿಕೆಯು ಸುಮಾರು 31 ಲಕ್ಷ ಹಾಗೂ ಬೆಂಗಳೂರು ದಕ್ಷಿಣ ನಗರ ಪಾಲಿಕೆಯು ಸುಮಾರು 30 ಲಕ್ಷ ಜನಸಂಖ್ಯೆಯನ್ನು ಹೊಂದಿರುವುದಾಗಿ ಅಂದಾಜು ಮಾಡಲಾಗಿದೆ. ಅಲ್ಲದೆ ಈ 05 ನಗರ ಪಾಲಿಕೆಗಳಲ್ಲಿ ಜನಸಾಂದ್ರತೆಯಲ್ಲಿಯೂ ಸಹ ವ್ಯತ್ಯಯವಿದ್ದು ಪ್ರತಿ ಚದರ ಕಿಲೋ ಮೀಟರ್‌ಗೆ ಬೆಂಗಳೂರು ಕೇಂದ್ರ ನಗರ ಪಾಲಿಕೆಯಲ್ಲಿ ಸುಮಾರು 32051, ಬೆಂಗಳೂರು ಉತ್ತರ ನಗರ ಪಾಲಿಕೆಯಲ್ಲಿ ಸುಮಾರು 19620, ಬೆಂಗಳೂರು ದಕ್ಷಿಣ ನಗರ ಪಾಲಿಕೆಯಲ್ಲಿ ಸುಮಾರು 20408, ಬೆಂಗಳೂರು ಪೂರ್ವ ನಗರ ಪಾಲಿಕೆಯಲ್ಲಿ ಸುಮಾರು 7738 ಹಾಗೂ ಬೆಂಗಳೂರು ಪಶ್ಚಿಮ ನಗರ ಪಾಲಿಕೆಯಲ್ಲಿ ಸುಮಾರು 27950 ಜನಸಾಂದ್ರತೆ ಇರುವುದಾಗಿ ಅಂದಾಜು ಮಾಡಲಾಗಿದೆ. ಈ ಕಾರಣಗಳ ಹಿನ್ನೆಲೆಯಲ್ಲಿ ಗ್ರೇಟರ್ ಬೆಂಗಳೂರು ಪ್ರದೇಶದಲ್ಲಿನ ಐದೂ ನಗರ ಪಾಲಿಕೆಗಳಲ್ಲಿ ಸಮಾನ ಸಂಖ್ಯೆಯ ವಾರ್ಡ್‌ಗಳನ್ನು ರಚಿಸಲು ಸಾಧ್ಯವಿರುವುದಿಲ್ಲ.

   ಆದಕಾರಣ, 05 ನಗರ ಪಾಲಿಕೆಗಳಲ್ಲಿ ವಾರ್ಡ್‌ಗಳ ಸಂಖ್ಯೆ ಮತ್ತು ಗಡಿಗಳನ್ನು ಗುರುತಿಸಲು ಈ ಮುಂದಿನಂತೆ ಮಾರ್ಗಸೂಚಿಯನ್ನು ನೀಡಲಾಗಿದೆ. ಬಿಬಿಎಂಪಿ ವ್ಯಾಪ್ತಿಯಲ್ಲಿ (ಪ್ರಸ್ತುತ ಗ್ರೇಟರ್ ಬೆಂಗಳೂರು ಪ್ರದೇಶ ವ್ಯಾಪ್ತಿ) ಹಿಂದಿನ ಜನಗಣತಿಯ (2011 ರ) ಅನುಸಾರ ಒಂದು ವಾರ್ಡ್‌ನಲ್ಲಿ ಸುಮಾರು 20000 ಜನ ಸಂಖ್ಯೆ ಇದ್ದಲ್ಲಿ ಅದು 2023 ರ ಜನಸಂಖ್ಯೆಯ ಅಂದಾಜಿನ ಅನುಸಾರ ಸುಮಾರು 33882 ಜನಸಂಖ್ಯೆಯಾಗುತ್ತದೆ. ಅಲ್ಲದೆ 2025 ರ ವೇಳೆಗೆ ಅದರ ಪ್ರಮಾಣ ಇನ್ನೂ

ಹೆಚ್ಚಾಗಿರುವ ಸಾಧ್ಯತೆ ಇದೆ. ಆದ್ದರಿಂದ ಗ್ರೇಟರ್ ಬೆಂಗಳೂರು ಪ್ರದೇಶದ ಐದು ನಗರ ಪಾಲಿಕೆಗಳ ವಾರ್ಡ್ ಸರಾಸರಿ ಜನಸಂಖ್ಯೆಯನ್ನು ಹಿಂದಿನ ಜನಗಣತಿಯನ್ನು ಆಧರಿಸಿ 20,000 (ಇಪ್ಪತ್ತು ಸಾವಿರ)ದಷ್ಟು ಎಂದು ನಿರ್ಧರಿಸಲಾಗಿದೆ. ಜನಸಾಂದ್ರತೆಯ ವ್ಯತ್ಯಾಸ ಹಾಗೂ ನಗರ ಪಾಲಿಕೆಗಳಲ್ಲಿ ಜನಸಂಖ್ಯೆಯ ವ್ಯತ್ಯಾಸದಿಂದಾಗಿ, ಪ್ರತಿ ನಗರ ಪಾಲಿಕೆಯಲ್ಲಿ ವಾರ್ಡಿನಲ್ಲಿರುವ ಸರಾಸರಿ ಜನಸಂಖ್ಯೆಯನ್ನು ನಿಗದಿಪಡಿಸಬೇಕು. **ಈ ಸರಾಸರಿಯು 20000+/- 25% ಒಳಗೆ ಇರಬೇಕು**. ಆಯಾ ನಗರ ಪಾಲಿಕೆ ಜನಸಂಖ್ಯೆಯನ್ನು ವಾರ್ಡಿನ ಸರಾಸರಿ ಜನಸಂಖ್ಯೆಯಿಂದ ವಿಭಜಿಸಿ ಆಯಾ ನಗರ ಪಾಲಿಕೆಯ ಒಟ್ಟು ವಾರ್ಡುಗಳ ಸಂಖ್ಯೆಯನ್ನು ನಿರ್ಣಯಿಸಬೇಕು. ಈ ಅಂಶಗಳನ್ನು ಹಾಗೂ ಗ್ರೇಟರ್ ಬೆಂಗಳೂರು ಆಡಳಿತ ಅಧಿನಿಯಮ, 2024 ರ ಕಲಂ 29 (3) (a) ರ ಪರಂತುಕದಲ್ಲಿ ವಿಧಿಸಲಾದ 150 ಸಂಖ್ಯೆಯ ವಾರ್ಡ್‌ಗಳ ಗರಿಷ್ಠ ಮಿತಿಯನ್ನು ಗಮನದಲ್ಲಿ ಇರಿಸಿಕೊಂಡು ವಾರ್ಡ್‌ಗಳ ಪುನರ್‌ವಿಂಗಡಣಾ ಆಯೋಗವು ಪ್ರತಿ ನಗರ ಪಾಲಿಕೆಯಲ್ಲಿ ವಾರ್ಡ್‌ಗಳ ಸಂಖ್ಯೆಯನ್ನು ಅಂತಿಮಗೊಳಿಸತಕ್ಕದ್ದು.

**ಪ್ರತಿ ನಗರ ಪಾಲಿಕೆಯಲ್ಲಿ ವಾರ್ಡ್ ಗಡಿಗಳನ್ನು ನಿರ್ಧರಿಸುವ ವಿಧಾನ:**

2. ಗ್ರೇಟರ್ ಬೆಂಗಳೂರು ಪ್ರದೇಶದ ವ್ಯಾಪ್ತಿಯಲ್ಲಿ ನೂತನವಾಗಿ ಸ್ಥಾಪಿಸಲಾಗಿರುವ 05 ನಗರ ಪಾಲಿಕೆಗಳಿಗೆ ಸಂಬಂಧಿಸಿದಂತೆ, ವಾರ್ಡ್‌ಗಳನ್ನು ಭಾರತ ಸರ್ಕಾರವು ಪ್ರಕಟಿಸಿದ ಹಾಗೂ ಪ್ರಸ್ತುತ ಲಭ್ಯವಿರುವ ಹಿಂದಿನ ಜನಗಣತಿ ಅಂದರೆ 2011 ಜನಗಣತಿಯ ಅಂಕಿ-ಅಂಶಗಳ ಆಧಾರದ ಮೇಲೆ ವಿಂಗಡಿಸಬೇಕು.

3. ಗ್ರೇಟರ್ ಬೆಂಗಳೂರು ಪ್ರದೇಶದ ವ್ಯಾಪ್ತಿಯಲ್ಲಿ ನೂತನವಾಗಿ ಸ್ಥಾಪಿಸಲಾಗಿರುವ 05 ನಗರ ಪಾಲಿಕೆಗಳಲ್ಲಿನ ಪ್ರತಿಯೊಂದು ವಾರ್ಡನ್ನು ಆಯಾ ನಗರ ಪಾಲಿಕೆಯ ಗಡಿ ಮಿತಿಗೆ ಒಳಪಟ್ಟು ವಿಧಾನಸಭೆಯ ಸದಸ್ಯರ ಚುನಾವಣಾ ಕ್ಷೇತ್ರ ವ್ಯಾಪ್ತಿಯೊಳಗೆ ಬರುವ ರೀತಿಯಲ್ಲಿಯೇ ವಿಭಾಗಿಸತಕ್ಕದ್ದು ಮತ್ತು ಯಾವುದೇ ವಾರ್ಡ್‌ಗಳು ಆಯಾ ವಿಧಾನಸಭೆಯ ಮತಕ್ಷೇತ್ರದ ವ್ಯಾಪ್ತಿಯಿಂದ ಇತರ ವಿಧಾನಸಭಾ ಮತಕ್ಷೇತ್ರಗಳಿಗೆ ಒಳಪಡತಕ್ಕದ್ದಲ್ಲ.

4. ಗ್ರೇಟರ್ ಬೆಂಗಳೂರು ಪ್ರದೇಶದ ವ್ಯಾಪ್ತಿಯಲ್ಲಿ ನೂತನವಾಗಿ ಸ್ಥಾಪಿಸಲಾಗಿರುವ 05 ನಗರ ಪಾಲಿಕೆಗಳ ವಾರ್ಡ್‌ಗಳು ಕಾರ್ಯಸಾಧ್ಯವಾದ ಮಟ್ಟಿಗೆ, ಭೌಗೋಳಿಕವಾಗಿ ದಟ್ಟವಾದ (ಕಾಂಪ್ಯಾಕ್ಟ್) ಪ್ರದೇಶಗಳಾಗಿರಬೇಕು ಮತ್ತು ಅವುಗಳನ್ನು ಮರು ವಿಂಗಡಣೆ ಮಾಡುವಾಗ ಭೌತಿಕ ಲಕ್ಷಣಗಳು, ಸಂವಹನ ಸೌಲಭ್ಯಗಳು ಮತ್ತು ಸಾರ್ವಜನಿಕರ ಅನುಕೂಲಗಳನ್ನು ಪರಿಗಣಿಸಬೇಕು.

5. ಒಂದು ವಾರ್ಡ್‌ನೊಳಗಿನ ಪ್ರದೇಶವು ಇತರ ವಾರ್ಡ್‌ಗಳಿಗೆ ವಿಸ್ತರಿಸಬಾರದು. ಅಂದರೆ, ಒಂದು ವಾರ್ಡ್‌ಗೆ ಸಂಬಂಧಿಸಿದ ವಾರ್ಡ್‌ನ ಇತರ ಪ್ರದೇಶಗಳಿಗೆ ಯಾವುದೇ ಸಂಪರ್ಕವನ್ನು ಹೊಂದಿರದ ಮತ್ತೊಂದು ವಾರ್ಡ್‌ಗೆ ಸೇರಿದ ಕೆಲವು ಪ್ರದೇಶಗಳ ಎನ್‌ಕ್ಲೇವ್ / ದ್ವೀಪವನ್ನು ಹೊಂದಿರತಕ್ಕದ್ದಲ್ಲ.

6. ವಾರ್ಡುಗಳ ಮರುವಿಂಗಡಣೆ ಮಾಡುವ ಸಂದರ್ಭದಲ್ಲಿ ಕೆಲವು ಸಂದಿಗ್ಧತೆಗಳನ್ನು ಹೊರತುಪಡಿಸಿ, ಗುಡ್ಡಗಾಡು ಶ್ರೇಣಿಗಳು ಅಥವಾ ಕಾಡುಗಳು ಅಥವಾ ಕಂದರಗಳಿಂದ ವಿಭಜಿಸಲ್ಪಟ್ಟ ಪ್ರದೇಶಗಳು ಮತ್ತು ಇತರ ನೈಸರ್ಗಿಕ ಅಡೆತಡೆಗಳನ್ನು ಒಳಗೊಳ್ಳುವ ಸಂದರ್ಭದಲ್ಲಿ ಪಕ್ಕದ, ಭೌಗೋಳಿಕ ವೈಶಿಷ್ಟ್ಯಗಳು, ಸಂಪರ್ಕ, ಸಂವಹನ ಸಾಧನಗಳು, ಸಾರ್ವಜನಿಕ ಅನುಕೂಲಗಳನ್ನು ಗಮನದಲ್ಲಿಟ್ಟುಕೊಂಡು ಅದೇ ವಾರ್ಡ್‌ಗೆ ಸೇರಿಸಲು ಕ್ರಮವಹಿಸತಕ್ಕದ್ದು.

7. ಕೆಲವು ಗುಣ ಲಕ್ಷಣಗಳನ್ನು ಹೊಂದಿರುವ ಪ್ರದೇಶಗಳಾದ ಕಾಲೋನಿಗಳು, ನಿರ್ದಿಷ್ಟ ರಸ್ತೆ ಮಾದರಿಗಳು, ಕೊಳಚೆ ಪ್ರದೇಶಗಳು - ಇವುಗಳನ್ನು ವಾರ್ಡುಗಳ ಮರುವಿಂಗಡಣೆ ಪ್ರಕ್ರಿಯೆಯಲ್ಲಿ ಸಾಧ್ಯವಾದ ಮಟ್ಟಿಗೆ ಪೂರ್ಣ ಬ್ಲಾಕ್‌ಗಳನ್ನೇ ಆಯಾ ವಾರ್ಡುಗಳಲ್ಲಿ ವಿಂಗಡಿಸಿ ನಿರ್ವಹಿಸಬೇಕು.

**ನಗರ ಪಾಲಿಕೆಗಳ ಒಳಗೆ ವಾರ್ಡುಗಳ ರಚನೆ ಮಾಡುವ ವಿಧಾನ**:

8. ಮೇಲಿನ ಕಂಡಿಕೆ (1) ರಲ್ಲಿ ತಿಳಿಸಲಾದಂತೆ ಪ್ರತಿ ನಗರ ಪಾಲಿಕೆಯಲ್ಲಿ ವಾರ್ಡುಗಳ ಸಂಖ್ಯೆ ಮತ್ತು ಸರಾಸರಿ ಜನಸಂಖ್ಯೆಯನ್ನು ನಿಗಧಿಪಡಿಸಿಕೊಂಡ ಬಳಿಕ, ಮೇಲಿನ ಕಂಡಿಕೆ (2) ರಿಂದ (7) ರಲ್ಲಿ ತಿಳಿಸಿರುವ ಷರತ್ತುಗಳ ಅನ್ವಯ ಪರಿಶೀಲಿಸಿ ಪ್ರತಿ ನಗರ ಪಾಲಿಕೆಯಲ್ಲಿನ ಜನಸಾಂದ್ರತೆಯನ್ನು ಗಮನದಲ್ಲಿ ಇರಿಸಿಕೊಂಡು ಆಯಾ ನಗರ ಪಾಲಿಕೆಗೆ ಪ್ರತ್ಯೇಕವಾಗಿ ಅನ್ವಯವಾಗುವಂತೆ ವಾರ್ಡುಗಳ ರಚನೆ ಮಾಡತಕ್ಕದ್ದು. ಈ ಸಂದರ್ಭದಲ್ಲಿ ಪ್ರತ್ಯೇಕ ನಗರ ಪಾಲಿಕೆಗಳ ವಾರ್ಡುಗಳಲ್ಲಿನ ಜನಸಂಖ್ಯೆಯ ಸದರಿ ನಗರ ಪಾಲಿಕೆಯ ಎಲ್ಲಾ ವಾರ್ಡುಗಳ ಸರಾಸರಿ ಜನಸಂಖ್ಯೆಯ (ಮೇಲಿನ ಕಂಡಿಕೆ 1 ರಲ್ಲಿ ನಿರ್ಧರಿಸಿರುವಂತೆ) **20 ಪ್ರತಿಶತದಷ್ಟು ವಿಚಲನದೊಂದಿಗೆ (deviation of 20%) ನಿರ್ಧರಿಸಿ** ಕ್ರಮವಹಿಸುವುದು ಸ್ವೀಕಾರಾರ್ಹವಾಗಿರುತ್ತದೆ.

9. ಸರ್ಕಾರವು ಕರಡು ಅಧಿಸೂಚನೆಯನ್ನು ಸಾರ್ವಜನಿಕರ ಅನುಕೂಲಕ್ಕಾಗಿ ಈ ಕೆಳಗಿನ ರೀತಿಯಲ್ಲಿ ಪ್ರಕಟಿಸಬೇಕು:

    (i) ಗೆಜೆಟ್ ಅಧಿಸೂಚನೆಯ ಮೂಲಕ ಮತ್ತು ಎರಡು ವ್ಯಾಪಕವಾಗಿ ಪ್ರಸಾರವಾಗುವ ದಿನಪತ್ರಿಕೆಗಳಲ್ಲಿ (ಕನಿಷ್ಠ ಒಂದಾದರೂ ಪತ್ರಿಕೆ ಕನ್ನಡ ಭಾಷೆಯಲ್ಲಿರುವಂತೆ) ಪ್ರತಿ ನಗರ ಪಾಲಿಕೆಗೆ ಪ್ರತ್ಯೇಕವಾಗಿ ಈ ವಿಷಯವನ್ನು ಪ್ರಕಟಿಸಿ ಸಾರ್ವಜನಿಕರ ಗಮನಕ್ಕೆ ತರುವುದು ಹಾಗೂ ಈ ಮೂಲಕವೂ ಸಹ ನಿರ್ದಿಷ್ಟಪಡಿಸಬಹುದಾದ, ಗ್ರೇಟರ್ ಬೆಂಗಳೂರು ಪ್ರದೇಶದ ವ್ಯಾಪ್ತಿಯಲ್ಲಿ ನೂತನವಾಗಿ ಸ್ಥಾಪಿಸಲಾಗಿರುವ 05 ನಗರ ಪಾಲಿಕೆಗಳ ವ್ಯಾಪ್ತಿಗೊಳಪಡುವ ಸಾರ್ವಜನಿಕರಿಂದ ಕನಿಷ್ಟ 15 ದಿನಗಳ ಕಾಲಾವಕಾಶ ನೀಡಿ ಲಿಖಿತ ರೂಪದಲ್ಲಿ ಆಕ್ಷೇಪಣೆ ಮತ್ತು ಸಲಹೆಗಳನ್ನು ಆಹ್ವಾನಿಸುವುದು.

    (ii) ಆಕ್ಷೇಪಣೆ / ಸಲಹೆಗಳನ್ನು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ ಇವರಿಗೆ ವಿಳಾಸಿಸಿ, ಖುದ್ದಾಗಿ ಲಿಖಿತ ರೂಪದಲ್ಲಿ ಸ್ಪಷ್ಟವಾಗಿ ಆಕ್ಷೇಪಣೆಗಳನ್ನು ಮತ್ತು ಸಲಹೆಗಳನ್ನು ಸಲ್ಲಿಸುವಂತೆ ತಿಳಿಸುವುದು. ಸಲ್ಲಿಕೆಯಾದ ಸದರಿ ಆಕ್ಷೇಪಣೆ / ಸಲಹೆಗಳನ್ನು ವಾರ್ಡ್‌ಗಳ ಪುನರ್ ವಿಂಗಡಣಾ ಆಯೋಗವು ಪರಿಶೀಲಿಸಿ, ಸ್ಪಷ್ಟ ವಿವರಣೆಗಳೊಂದಿಗೆ ವಾರ್ಡುಗಳ ರಚನೆಯ ಅಂತಿಮ ಶಿಫಾರಸ್ಸನ್ನು ಸರ್ಕಾರಕ್ಕೆ ಸಲ್ಲಿಸುವುದು.

10. ಗ್ರೇಟರ್ ಬೆಂಗಳೂರು ಪ್ರದೇಶದ ವ್ಯಾಪ್ತಿಯಲ್ಲಿ ನೂತನವಾಗಿ ಸ್ಥಾಪಿಸಲಾಗಿರುವ 05 ನಗರ ಪಾಲಿಕೆಗಳಲ್ಲಿನ ಪ್ರತಿ ವಾರ್ಡುಗಳ ಗಡಿಗಳ (ಸೀಮೆಯ) ಹೇಳಿಕೆಯನ್ನು ವಾರ್ಡುಗಳ ಪುನರ್‌ವಿಂಗಡಣಾ ಆಯೋಗವು ಈ ಕೆಳಗಿನಂತೆ ಸಿದ್ಧಪಡಿಸುವುದು.

ಉದಾಹರಣೆ:- ಗ್ರೇಟರ್ ಬೆಂಗಳೂರು ಪ್ರದೇಶದ ಕೇಂದ್ರ ನಗರ ಪಾಲಿಕೆ, ಬೆಂಗಳೂರು

| **ಕ್ರ.ಸಂ.** | **ವಾರ್ಡ್‌ನ ಹೆಸರು ಮತ್ತು ಸಂಖ್ಯೆ** | **ವಾರ್ಡ್‌ನ ವಿಸ್ತರಣೆ** |
|---|---|---|
| 1. | XXXX | ಉತ್ತರ: ಗಡಿ (ಸೀಮೆ)ಯ ವಿವರಗಳು<br>ದಕ್ಷಿಣ: ಗಡಿ (ಸೀಮೆ)ಯ ವಿವರಗಳು<br>ಪೂರ್ವ: ಗಡಿ (ಸೀಮೆ)ಯ ವಿವರಗಳು<br>ಪಶ್ಚಿಮ: ಗಡಿ (ಸೀಮೆ)ಯ ವಿವರಗಳು |
| 2. | | |

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



11. ವಾರ್ಡ್‌ಗಳ ಪುನರ್ ವಿಂಗಡಣಾ ಆಯೋಗ ಮತ್ತು ಸರ್ಕಾರದ ಹಂತದಲ್ಲಿ ವಾರ್ಡುಗಳ ರಚನೆಗೆ ಈ ಕೆಳಗಿನಂತೆ ಕಾಲಾನುಕ್ರಮಣಿಕೆಯನ್ನು ನಿಗದಿಪಡಿಸಿದೆ:

| **ಕ್ರ. ಸಂ** | **ಘಟನಾವಳಿ** | **ದಿನಾಂಕ** |
|---|---|---|
| 1 | ನಗರ ಪಾಲಿಕೆಗಳ ಸ್ಥಾಪನೆಯ ಅಂತಿಮ ಅಧಿಸೂಚನೆ ಹಾಗೂ ವಾರ್ಡುಗಳ ಪುನರ್ ವಿಂಗಡಣಾ ಆಯೋಗದ ರಚನೆ ಅಧಿಸೂಚನೆ | 02-09-2025 |
| 2 | ಆಯೋಗದಿಂದ ಸರ್ಕಾರಕ್ಕೆ ವಾರ್ಡುಗಳ ರಚನಾ ವರದಿ ಸಲ್ಲಿಕೆ (3 ವಾರಗಳ ಕಾಲಾವಧಿ) | 23-09-2025 |
| 3 | ಸರ್ಕಾರದಿಂದ ಕರಡು ಅಧಿಸೂಚನೆ ಪ್ರಕಟಣೆ (3 ದಿನಗಳ ಕಾಲಾವಧಿ) | 26-09-2025 |
| 4 | ಸಲಹೆ/ ಆಕ್ಷೇಪಣೆಗೆ ಅಂತಿಮ ದಿನಾಂಕ (2 ವಾರಗಳ ಕಾಲಾವಧಿ) | 10-10-2025 |
| 5 | ವಾರ್ಡ್‌ಗಳ ಪುನರ್ ವಿಂಗಡಣಾ ಆಯೋಗವು ಸಲಹೆ/ ಆಕ್ಷೇಪಣೆಗಳನ್ನು ಪರಿಶೀಲಿಸಿ ಅಂತಿಮ ಶಿಫಾರಸ್ಸನ್ನು ಸರ್ಕಾರಕ್ಕೆ ಸಲ್ಲಿಸುವುದು (1 ವಾರದ ಕಾಲಾವಧಿ) | 17-10-2025 |
| 6 | ಪರಿಶೀಲನೆಯ ಬಳಿಕ ಸರ್ಕಾರದಿಂದ ಅಂತಿಮ ಅಧಿಸೂಚನೆ ಪ್ರಕಟಣೆ | 01-11-2025ರ ಒಳಗಾಗಿ |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ನಂದಕುಮಾರ್ ಬಿ)**
ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ
(ಬಿಬಿಎಂಪಿ-2 ಮತ್ತು ಸಮನ್ವಯ)

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು
THAMMAIAH